**<u>3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಸತ್ರ ಪ್ರಕರಣ ಸಂಖ್ಯೆಃ 46/2023</u>**

ದಿನಾಂಕಃ 24.01.2025
(ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು)

ದೋ.ಪ. - 14 ಅ.ಸಾ -13

| | | |
|---|---|---|
| ಹೆಸರು | ಃ | ಶ್ರೀ. ಸ್ವಾಮಿ |
| ತಂದೆಯ ಹೆಸರು | ಃ | ಚನ್ನೇಗೌಡ |
| ವಯಸ್ಸು | ಃ | 40 ವರ್ಷ |
| ಉದ್ಯೋಗ | ಃ | ಖಾಸಗಿ ಕೆಲಸ |
| ವಾಸಸ್ಥಳ | ಃ | ಇಗ್ಗಲೂರು |

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನಾನು ಕಳೆದ 2 ವರ್ಷಗಳಿಂದ ಇಗ್ಗಲೂರು-ಚನ್ನಪಟ್ಟಣ ಮುಖ್ಯ ರಸ್ತೆಯಲ್ಲಿ ಸೌಮ್ಯ ಟೀ ಸ್ಟಾಲ್ ಇಟ್ಟುಕೊಟ್ಟಿದ್ದೇನೆ. ಬೆಳಿಗ್ಗೆ 6.00 ರಿಂದ ರಾತ್ರಿ ಸುಮಾರು 9.30 ರವರಗೆ ಇರುತ್ತೇನೆ. ನ್ಯಾಯಾಲಯದಲ್ಲಿ ಕುಳಿತಿರುವ ಆರೋಪಿಗಳನ್ನು ನಾನು ಈ ಹಿಂದೆ ನೋಡಿಲ್ಲ. ನಾನು ಇವರನ್ನು ನನ್ನ ಅಂಗಡಿ ಬಳಿ ಯಾವತ್ತು ಬಂದಿರುವುದನ್ನು ಮತ್ತು ಕುಳಿತು ಮಾತನಾಡುತ್ತಿರುವುದನ್ನು ನೋಡಿರುವುದಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಮಾನ್ಯ ಅಭಿಯೋಜಕರು ಕೋರಿರುತ್ತಾರೆ. ವಾದ ಆಲಿಸಿರುತ್ತದೆ. ಪ್ರಕರಣದ ಕಡತವನ್ನು ಪರಿಶೀಲಿಸಿದ್ದು ಸಾಕ್ಷಿ ತನ್ನ ದಿನಾಂಕ 30.10.2022 ರ ಹೇಳಿಕೆ ಪ್ರಕಾರ ಸಾಕ್ಷ್ಯ ಹೇಳದೇ ಇರುವುದು ಕಂಡುಬಂದಿದ್ದು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಗಳು ನನ್ನ ಟೀ ಅಂಗಡಿ ಬಳಿ ಬಂದು ಟೀ ಕುಡಿದಿರುತ್ತಾರೆ ಮತ್ತು ಕುಳಿತು ಮಾತನಾಡಿರುತ್ತಾರೆ ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ಚನ್ನಪಟ್ಟಣ ಗ್ರಾಮಾಂತರ ವೃತ್ತ ನಿರೀಕ್ಷಕರು ಆರೋಪಿಗಳನ್ನು ಕರೆ ತಂದು ಅವರುಗಳ ಹೆಸರು ಮತ್ತು ವಿಳಾಸ ನನಗೆ ತಿಳಿಸಿ ಅವರುಗಳು ನನ್ನ ಅಂಗಡಿ ಬಳಿ ಒಳಸಂಚು ನಡೆಸಿ ಕೊಲೆ ಮಾಡಿರುತ್ತಾರೆಂದು ಹೇಳಿದರು ಎನ್ನುವುದು ಸರಿ ಅಲ್ಲ. ಮೂರು ಜನ ಆರೋಪಿಗಳನ್ನು ನಾನು ಕೊಲೆಗೆ ಮುಂಚೆ ನನ್ನ ಅಂಗಡಿ ಪಕ್ಕದ ವಪ್ಪರದಲ್ಲಿ ಕುಳಿತು ಟೀ ಕುಡಿಯುತ್ತಾ ಏನಾದರೂ ಮಾಡಿ ಶಿವು ಮುಗಿಸಲೇ ಬೇಕು ಎಂದು ಗುಸುಗುಸು ಮಾತನಾಡುತ್ತಿದ್ದು ನಾನು ಟೀ ಕೊಡುವಾಗ ಕೇಳಿಸಿಕೊಂಡಿದ್ದೆ ಎನ್ನುವುದು ಸರಿ ಅಲ್ಲ. ದಿನಾಂಕ 28.10.2022 ರ ಬೆಳಿಗೆ 11.30 ರ ಸಮಯಕ್ಕೂ ಸಹ ಆರೋಪಿಗಳು ನನ್ನ ಅಂಗಡಿ ಬಳಿ ಬಂದು ಗುಸುಗುಸು ಮಾತನಾಡಿದ್ದನ್ನು ನಾನು ನೋಡಿರುತ್ತೇನೆ ಎನ್ನುವುದು ಸರಿ ಅಲ್ಲ. ದಿನಾಂಕ 30.10.2022 ರಂದು ಮೇಲೆ ಸೂಚಿಸಿದಂತೆ ನಡೆದಿರುವುದರ ಕುರಿತು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿ ಅಲ್ಲ. ಹೇಳಿಕೆಯನ್ನು **ನಿಪಿ-20** ಎಂದು ಗುರುತಿಸಲಾಯಿತು. ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದರಿಂದ ಅವರುಗಳಿಗೆ ಶಿಕ್ಷೆ ಆಗುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿ ಅಲ್ಲ.

**<u>ಪಾಟೀ ಸವಾಲುಃ ಇಲ್ಲಃ</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ರಾಘವೇಂದ್ರ. ಜಿ)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.